**ಅಸಲು ದಾವಾ ನಂ.276/2022**
**ಡಿ.ಡಬ್ಲ್ಯೂ:01**

**<u>ದಿನಾಂಕ: 13.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಪಾಟೀ ಸವಾಲು: ವಾದಿ ಪರ ವಕೀಲರಿಂದ</u>**

1) 1 ನೇ ಪ್ರತಿವಾದಿ ನನಗೆ ನೀಡಿದ ಅಧಿಕಾರ ಪತ್ರವನ್ನು ನಾನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲೆಗಳನ್ನು ನೀಡಿ ಅದರಲ್ಲಿ ಸದರಿ ದಾಖಲೆ ಇದೆಯೇ ಎಂದು ಕೇಳಿದರೆ ಇಲ್ಲ ಅಂತಾ ನುಡಿಯುತ್ತಾರೆ. 1 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿ ನೋಡಿರುತ್ತೇನೆ. ದೇಗಿನಾಳದಿಂದ ಭೂತಪ್ಪನ ತಾಂಡಾವರೆಗೂ ರಸ್ತೆ ಮಾಡಲು ನಮಗೆ ಜಿಲ್ಲಾ ಪಂಚಾಯತಿವರು ನಮಗೆ ಆದೇಶ ನೀಡಿದ್ದರು. ಇದ್ದ ರಸ್ತೆಯನ್ನು ಸುದಾರಣೆ ಮಾಡಲು ನಮಗೆ ಆದೇಶ ನೀಡಿದ್ದರು. ರಸ್ತೆ ಅಗಲೀಕರಣಕ್ಕಾಗಿ ಆದೇಶ ನೀಡಿರಲಿಲ್ಲ ಎಂದರೆ ಸರಿ. ಸದರಿ ಕಾಮಗಾರಿಗೆ ರೂ.50,00,000/- ಮಂಜೂರು ಆಗಿತ್ತು. ದೇಗಿನಾಳದಿಂದ ಭೂತಪ್ಪನ ತಾಂಡಾವರೆಗೂ ಇರುವ ರಸ್ತೆಯನ್ನು ನಾನು ಗ್ರಾಮ ನಕಾಶೆಯನ್ನು ಪರಿಶೀಲನೆ ಮಾಡಿ ನೋಡಿರುವುದಿಲ್ಲ. ನಿ.ಡಿ. 3 ರಿಂದ 7 ಫೋಟೋಗಳನ್ನು ನೋಡಿ ಅವುಗಳನ್ನು ದೇಗಿನಾಳದಿಂದ 1.2 ಕಿ.ಮೀ ಅಂತರದಲ್ಲಿ ಹಾಗೂ 1.7 ಕಿ.ಮೀ ಅಂತರದಲ್ಲಿ ಸದರಿ ಫೋಟೋಗಳನ್ನು ತೆಗೆದಿರುವುದಾಗಿ ನೋಡಿ ಗುರುತಿಸಿರುತ್ತಾರೆ. ದೇಗಿನಾಳದಿಂದ ಭೂತಪ್ಪನ ತಾಂಡಾ 4 ಕಿ.ಮೀ ಅಂತರವಿರುತ್ತದೆ. 12 ಅಡಿ ಅಗಲ ರಸ್ತೆ ಮಾಡಲು ನೀಡಿದ್ದರು. 4 ಕಿ.ಮೀ ಉದ್ದ, 12 ಅಡಿ ಅಗಲ ರಸ್ತೆ ಇರುವ ಕುರಿತು ನಾನು ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಆದರೆ ಸ್ಥಳ ಪರಿಶೀಲನೆ ಮಾಡಿ ನೋಡಿರುತ್ತೇನೆ. ಸ್ಥಳ ಪರಿಶೀಲನೆ ಮಾಡುವಾಗ ಪ್ರತಿ 500 ಮೀಟರ್‌ಗೆ ಪರಿಶೀಲನೆ ಮಾಡಿ ನೋಡಿರುತ್ತೇನೆ. ಪ್ರತಿ 500 ಮೀಟರ್‌ಗೆ ಪರಿಶೀಲನೆ ಮಾಡುವಾಗ ತೆಗೆದ ಹಾಗೂ ಸದರಿ ರಸ್ತೆಯ ಹಳೆಯ ಫೋಟೊಗಳನ್ನು ಹಾಜರುಪಡಿಸಬಲ್ಲೆ. ಸ.ನಂ.227/4 ಬಿ ಜಮೀನಿನ ಪಶ್ಚಿಮ ಬದಿಗೆ ದೇಗಿನಾಳದಿಂದ ಭೂತಪ್ಪನ ತಾಂಡಾ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಜಮೀನು 3 ಎಕರೆ 13 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ ಜಮೀನಿನ ದಕ್ಷಿಣ ಬದಿಗೆ ಹತ್ತಿರಕಿಹಾಳದಿಂದ ಮಸಬಿನಾಳಗೆ ಹೋಗುವ ಒಂದು ರಸ್ತೆ ಇರುತ್ತದೆ ಎಂದರೆ ಸರಿ. ದೇಗಿನಾಳದಿಂದ ಭೂತಪ್ಪನ ತಾಂಡಾ ರಸ್ತೆ ಪ್ರತಿ 500 ಮೀಟರ್‌ಗೊಮ್ಮೆ ಪರಿಶೀಲನೆ ಮಾಡಿ ನೋಡಿದಾಗ 15 ಅಡಿಗಿಂತ ಹೆಚ್ಚು ಇತ್ತು. ಸದರಿ ಹಳೆಯ ರಸ್ತೆ ಅಕ್ಕ ಪಕ್ಕದ ಜಮೀನಿನಲ್ಲಿ ಅತೀಕ್ರಮಣ ಆದ ಕುರಿತು ಪರಿಶೀಲನೆ ಮಾಡಿ ನೋಡಿರುವುದಿಲ್ಲ. ನಿ.ಪಿ.3 ದಾಖಲೆಯಂತೆ 5 ಗುಂಟೆ ಅತೀಕ್ರಮಣ ಆಗಿರುತ್ತದೆ ಅಂತಾ ವಾದಿಯರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ವಾದ ಪತ್ರದೊಂದಿಗೆ

ಹಾಜರುಪಡಿಸಿದ ಹಾತ ನಕಾಶೆಯಲ್ಲಿ ತೋರಿಸಿದಂತೆ ವಾದಿಗೆ ಸೇರಿದ ಇ,ಎಪ್,ಸಿ. ಜಮೀನನ್ನು ಮೇಲಾಧಿಕಾರಿಗಳ ಪ್ರಭಾವಕ್ಕೊಳಗಾಗಿ ಅತೀಕ್ರಮಣ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಅಳತೆ ಮಾಡಲು ನಮ್ಮದೇನು ತಕರಾರು ಇರುವುದಿಲ್ಲ. ನಿ.ಪಿ.5 ದಾಖಲೆ ಮೇಲೆ ನಮ್ಮ ಕಛೇರಿಯ ಸೀಲು ಇರುತ್ತದೆ ಎಂದರೆ ಸರಿ. ನಿ.ಪಿ.5 ಅರ್ಜಿಯೊಂದಿಗೆ ಹಚ್ಚಿದ ದಾಖಲೆಗಳನ್ನು ಪರಿಶೀಲನೆ ಮಾಡಿ ನೋಡುತ್ತೇವೆ ಎಂದರೆ ಸರಿ. ನಿ.ಪಿ.5 ರೊಂದಿಗೆ ಪಿ.ಟಿ.ಶೀಟ, ನಕಾಶೆ ಮತ್ತು ಅರ್ಜಿ ನೀಡಿದ್ದರು ಸಹ ವಾದಿಯರ ಜಮೀನನ್ನು ಅತೀಕ್ರಮಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಜೆ.ಸಿ.ಬಿ ಮೂಲಕ ವಾದಿಯ ಜಮೀನಿನ ಪೂರ್ವ ಬದಿಯ ಒಡ್ಡನ್ನು ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ಹಳೆಯ ರಸ್ತೆ ವಾದಿಯ ಜಮೀನಿನಲ್ಲಿ ಅತೀಕ್ರಮಣವಾಗಿರುತ್ತದೆ ಅಂತಾ ತಿಳಿಸಿದ್ದರೂ ಸಹ ಹೊಸ ರಸ್ತೆಯನ್ನು ಅದರ ಮೇಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ರಸ್ತೆಯನ್ನು ಅಳತೆ ಮಾಡಿದ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಬೇಕಾಯ್ದೆಸಿರಿಯಿಂದ ದಾವಾ ಜಮೀನಿನಲ್ಲಿ ಯಾವುದೇ ದಾಖಲೆಗಳನ್ನು ಪರಿಶೀಲನೇ ಮಾಡದೇ ರಸ್ತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹಣ ಮಂಜೂರು ಮಾಡಿಕೊಳ್ಳುವ ಉದ್ದೇಶದಿಂದ ವಾದಿಯ ಜಮೀನಿನಲ್ಲಿ ಅತೀಕ್ರಮಣ ಮಾಡಿ ರಸ್ತೆ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.7 ಮತ್ತು 8 ಪೋಟೋಗಳಲ್ಲಿ ಒಡ್ಡನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ. ವಾದಿ ಜಮೀನಿನ ಪೂರ್ವ ಬದಿಯ ಉತ್ತರ ದಕ್ಷಿಣ ಒಡ್ಡನ್ನು ನಾವು ಅಕ್ರಮವಾಗಿ ತೆಗೆದಿದ್ದನ್ನು ತೋರಿಸುವ ನಿ.ಪಿ.7 ಮತ್ತು 8 ಪೋಟೋ ಎಂದರೆ ಸರಿಯಲ್ಲ. ವಾದಿ ಮೌಖಿಕವಾಗಿ ನಮಗೆ ತಿಳಿಸಿದ್ದರೂ ಸಹ ಬೇಕಾಯ್ದೆಸಿರಿಯಿಂದ ರಸ್ತೆ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಜಮೀನಿನಲ್ಲಿ ಬೆಳೆದ ಬೆಳೆಯನ್ನು ನಾಶ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.